## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂ ಎಫ್ ಸಿ ರವರ ನ್ಯಾಯಾಲಯ, ಮಳವಳ್ಳಿ

## ಸಿಸಿ ನಂಃ 264/2025

ಪಿರ್ಯಾದಿ : ಶ್ರೀ ನಾಗೇಂದ್ರು ಬಿನ್ ಬೋರೇಗೌಡ
ವಯಸ್ಸು: 35 ವರುಷ,
ವಾಸ: ಹೊಂಬೇಗೌಡನದೊಡ್ಡಿ ಗ್ರಾಮ,
ನೆಲಮಾಕನಹಳ್ಳಿ ಅಂಚೆ, ಮಳವಳ್ಳಿ ತಾಲ್ಲೂಕು,
ಮಂಡ್ಯ ಜಿಲ್ಲೆ.

- ವಿರುದ್ದ -

ಆರೋಪಿ : ಶ್ರೀ ಜಿ.ಎಸ್.ಶಶಿಕುಮಾರ (ಕೆಎಸ್ಆರ್‌ಟಿಸಿ)
ಬಿನ್ ಶಿವಣ್ಣ
ವಯಸ್ಸು: 40 ವರುಷ,
ವಾಸ: ಹಲಗೂರು ರಸ್ತೆ,
ಕೆ.ಎಂ.ದೊಡ್ಡಿ (ಭಾರತೀನಗರ) ಗ್ರಾಮ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ಕಲಂ 313 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಆರೋಪಿಯ ಹೇಳಿಕೆ.

1) ಅಭಿಯೋಜನೆ ಪರ ಹೇಳಿದ ಸಾಕ್ಷಿಗಳ ಹೇಳಿಕೆಯನ್ನು ಕೇಳಿದ್ದೀರಾ?

ಉತ್ತರಃ

2) ಪ್ರಾಸಾ1 ಶ್ರೀ ನಾಗೇಂದ್ರು ರವರು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಆರೋಪಿಯಾದ ನೀವು ಅವರಿಗೆ ಪರಿಚಯಸ್ಥರಾಗಿದ್ದು, ಅದ್ದರಿಂದ ದಿನಾಂಕ **12.09.2013** ರಂದು ನೀವು ಅವರಿಂದ ರೂ.**50,000/-** ಗಳನ್ನು ಸಾಲವಾಗಿ ಪಡೆದು, ಅದನ್ನು ದಿನಾಂಕ **12.12.2013** ಒಳಗಾಗಿ ಹಿಂದುರುಗಿಸುವುದಾಗಿ ಭರವಸೆ ನೀಡಿರುತ್ತೀರಿ. ದಿನಾಂಕ **14.12.2013** ರಂದು ಪಿರ್ಯಾದುದಾರರು ಆರೋಪಿಯಾದ ನಿಮ್ಮನ್ನು ಬೇಟಿ ಮಾಡಿ ಸಾಲದ ಮೊತ್ತವನ್ನು ಹಿಂದುರುಗಿಸುವಂತೆ ಕೇಳಿದಾಗ, ಆರೋಪಿಯಾದ ನೀವು **739108** ನಂಬರಿನ ಭಾರತೀನಗರ ಶಾಖೆಯ ವಿಶ್ವೇಶ್ವರಯ್ಯ ಗ್ರಾಮೀಣ (ಕಾವೇರಿ ಗ್ರಾಮೀಣ ಬ್ಯಾಂಕ್) ಬ್ಯಾಂಕಿನ ಚೆಕ್ಕನ್ನು ದಿನಾಂಕ **14.12.2013** ಎಂದು ನಮೂದಿಸಿ ಅವರಿಗೆ ನೀಡಿ ಅದನ್ನು ಬ್ಯಾಂಕಿಗೆ ಹಾಜರುಪಡಿಸುವಂತೆ ತಿಳಿಸಿರುತ್ತೀರಾ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನೂ ಹೇಳುವಿರಿ **?**

ಉತ್ತರಃ

**3)** ಪ್ರಾಸಾ**1** ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನುಡಿದಿರುವುದೇನೆಂದರೆ, ಅವರು ನೀವು ನೀಡಿದ ಚೆಕ್ಕನ್ನು ಮಳವಳ್ಳಿ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕಿಗೆ ಹಾಜರುಪಡಿಸಿದಾಗ, ಅರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ದಿನಾಂಕ **20.12.2013** ರಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ದಿನಾಂಕ **20.01.2014** ರಂದು ಅವರು ಆರೋಪಿಯಾದ ನಿಮಗೆ ತಿಳುವಳಿಕೆ ನೋಟೀಸನ್ನು ಕಳುಹಿಸಿದ್ದು, ಅದನ್ನು ನೀವು ಸ್ವೀಕರಿಸಿರುವುದಿಲ್ಲ. ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಗೊತ್ತಿದ್ದರೂ ಸಹ ಅವರಿಗೆ ಚೆಕ್ಕನ್ನು ನೀಡಿರುತ್ತೀರಿ ಎಂದು ನುಡಿದಿರುತ್ತಾರೆ, ಇದಕ್ಕೆ ನೀವು ಏನೂ ಹೇಳುವಿರಿ **?**

ಉತ್ತರಃ

**4)** ನಿಮ್ಮ ಪರ ಸಾಕ್ಷ್ಯ ವಿಚಾರಣೆ ಮಾಡಿಸುವಿರಾ**?**

ಉತ್ತರಃ

**5)** ನೀವು ನ್ಯಾಯಾಲಯಕ್ಕೆ ಹೆಚ್ಚುವರಿಯಾಗಿ ಏನಾದರೂ ಹೇಳುವುದು ಇದೆಯೇ**?**

ಉತ್ತರಃ

**(**ಮೇಲ್ಕಂಡ ಆರೋಪಿಯ ಹೇಳಿಕೆಗಳನ್ನು ತೆರೆದ ನ್ಯಾಯಾಲಯದಲ್ಲಿ ದಾಖಲಿಸಿಕೊಂಡು ಆರೋಪಿ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಗಿದೆ ಎಂದು ದೃಢೀಕರಿಸುತ್ತೇನೆ.**)**

ದಿನಾಂಕ **27.03.2026.**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಮಳವಳ್ಳಿ.